ನೆರವೇರಲಿಲ್ಲ. ಗೋವಾದ ಮಡಗಾಂವ್, ವಾಸ್ಕೊ ಹಾಗೂ ಪಣಜಿಯಲ್ಲಿ ಸುಮಾರು 5–6 ಕನ್ನಡ ಶಾಲೆಗಳನ್ನು ಪ್ರಾರಂಭಿಸಿದ ಹೆಮ್ಮೆ ನನ್ನದು.

ನಾನು ಗೋವೆಯಲ್ಲಿದ್ದಾಗ ಕರ್ನಾಟಕ–ಗೋವಾ ರಾಜ್ಯಗಳಲ್ಲಿ ಅನೇಕ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮಗಳನ್ನು ಆಯೋಜಿಸಿದ್ದೇನೆ. ಈ ಎರಡು ರಾಜ್ಯಗಳ ಕಲಾವಿದರನ್ನು, ಸಾಹಿತಿಗಳನ್ನು ಪರಸ್ಪರ ಪರಿಚಯಿಸುವ, ಅವರ ಪ್ರತಿಭೆಯನ್ನು ಮತ್ತೊಂದು ರಾಜ್ಯದವರಿಗೆ ತಿಳಿಸುವ ಕಾರ್ಯಗಳನ್ನು ನಡೆಸಿರುವುದು ನನಗೆ ತೃಪ್ತಿಯನ್ನು ತಂದಿದೆ. ನನ್ನ ಈ ಕಾರ್ಯದಲ್ಲಿ ಆಗ ಕರ್ನಾಟಕ ಸರಕಾರದಲ್ಲಿ ಸಚಿವರಾಗಿದ್ದ ಎಸ್.ಆರ್. ಕಂಠಿ, ಬಿ.ಡಿ. ಜತ್ತಿ, ನಿಜಲಿಂಗಪ್ಪ ಮೊದಲಾದ ಮಹನೀಯರು ನೀಡಿದ ನೆರವು, ಸಹಕಾರ ಮತ್ತು ಪ್ರೋತ್ಸಾಹಗಳನ್ನು ಮರೆಯುವ ಹಾಗಿಲ್ಲ. ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಾಗ ಈ ಎರಡೂ ರಾಜ್ಯಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವುದರಲ್ಲಿ ನನಗೆ ಅಪಾರ ನೆರವು ನೀಡಿದ್ದಾರೆ.

◆ **ಅನೇಕ ಸೃಜನಶೀಲ ಕೃತಿಗಳನ್ನೂ ರಚಿಸಿದ ನೀವು ಗುರುತಿಸಿಕೊಂಡಿರುವುದು ಕನ್ನಡದ ಒಬ್ಬ ಮಹತ್ವಪೂರ್ಣ ಅನುವಾದಕರಾಗಿ. ನಿಮ್ಮ ಬಹುಭಾಷಿಕತೆ ಹಾಗೂ ಅನುವಾದ ಕಾರ್ಯಗಳಿಂದ ಕೊಂಕಣಿ ಹಾಗೂ ಮರಾಠಿಯ ಅನೇಕ ಲೇಖಕರ ಕೃತಿಗಳು ಕನ್ನಡ ಸಾಹಿತ್ಯಲೋಕಕ್ಕೆ ಪರಿಚಯವಾಗಿವೆ. ಅನುವಾದ ಸಂದರ್ಭದಲ್ಲಿ ಮೂಲ ಕೃತಿಯ ಯಾವ ಅಂಶವನ್ನು ಮುಖ್ಯವಾಗಿ ಹಿಡಿದಿಡುವ ಕಡೆಗೆ ನಿಮ್ಮ ಲಕ್ಷ್ಯ ಇರುತ್ತದೆ? ಮತ್ತು ಅನುವಾದಕ್ಕೆ ಸಂಬಂಧಿಸಿದಂತೆ ನೀವು ಅನುಸರಿಸುವ ನಿಯಮಗಳೇನು?**

ನಾನು ಅನುವಾದ ಕಾರ್ಯಕ್ಕಾಗಿ ಬೇರೆ ಭಾಷೆಗಳ ಉತ್ತಮ ಕೃತಿಗಳನ್ನೇ ಆಯ್ಕೆ ಮಾಡಿಕೊಳ್ಳುತ್ತೇನೆ. ಬಹುತೇಕ ಸಂದರ್ಭಗಳಲ್ಲಿ ನನಗೆ ಪಥ್ಯದ ವಸ್ತು ಮುಖ್ಯವಾಗಿರುತ್ತದೆಯೇ ವಿನಹ ಲೇಖಕರಲ್ಲ. ವಿಭಿನ್ನ ವಸ್ತುವನ್ನು ಹೊಂದಿರುವ ಕೃತಿಗಳ ಅನುವಾದ ನನಗೆ ಯಾವಾಗಲೂ ತೃಪ್ತಿಯನ್ನು ಉಂಟು ಮಾಡುತ್ತದೆ. ಉದಾಹರಣೆಗೆ ಗೋವಾದ ಲೇಖಕ ದಾಮೋದರ ಮಾವಜೊ ಅವರು ಚಿತ್ರಿಸುವ ಕ್ಯಾಥೊಲಿಕ್ ಸಮುದಾಯದವರ ಬದುಕಿನ ಸುಖ ದುಃಖ ನೋವು ಸಂಕಷ್ಟಗಳು ವಾಸ್ತವನೆಲೆಯದ್ದಾಗಿರುವುದರಿಂದ ಅವು ಓದುಗರನ್ನು ಹೆಚ್ಚು ತಟ್ಟುವ ರೀತಿಯದ್ದಾಗಿವೆ. ನಾನು ಅವರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕಾದಂಬರಿ 'ಕಾರ್ಮೆಲೀನ್' ಹಾಗೂ ಕೆಲವು ಸಣ್ಣಕತೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದೇನೆ. ಇದೇ ರೀತಿ ಮರಾಠಿಯಿಂದ ಅನುವಾದಿಸಿರುವ ಬೃಹತ್ ಗ್ರಂಥ 'ತಾಮ್ರಪಟ'ವು ನನಗೆ ಹೆಚ್ಚು ತೃಪ್ತಿಯನ್ನು ನೀಡಿದೆ.

◆ **ಅನುವಾದ ಕಾರ್ಯದಲ್ಲಿ ನೀವು ಎದುರಿಸಿದ ತೊಡಕುಗಳೇನು ಮತ್ತು ನಿಮಗೆ ನಿಜಕ್ಕೂ ಸವಾಲು ಎನಿಸಿದ್ದು ಯಾವ ಕೃತಿಯ ಅನುವಾದ? ಯಾಕೆಂದರೆ ಯಾವ ಕೃತಿಯನ್ನಾದರೂ ಮೂಲಕ್ಕೆ ಸಮೀಪವಾಗಿ ಮಾಡಬಹುದೇ ಹೊರತು, ಪೂರ್ತಿಯಾಗಿ ಅನುವಾದಿಸಲು ಸಾಧ್ಯವಾಗುವುದಿಲ್ಲ ಎನ್ನುತ್ತಾರೆ ನುರಿತ ಅನುವಾದಕರು...**

ನಾನು ಹೆಚ್ಚಾಗಿ ಮರಾಠಿ ಮತ್ತು ಕೊಂಕಣಿಯಿಂದ ಕನ್ನಡಕ್ಕೆ ಅನೇಕ ಕೃತಿಗಳನ್ನು ಅನುವಾದಿಸಿದ್ದೇನೆ. ಕೊಂಕಣಿ ನನ್ನ ಮಾತೃಭಾಷೆ. ಗೋವೆಯಲ್ಲಿ ಇದ್ದುದರಿಂದ ಮರಾಠಿ ನಾಟಕಗಳನ್ನು ನಿಯಮಿತವಾಗಿ ನೋಡುತ್ತಾ ಮರಾಠಿಯನ್ನು ಕಲಿತುಕೊಂಡೆ. ಮರಾಠಿಯಿಂದ 'ಜೋಗವಾ' ಕಾದಂಬರಿ ಹಾಗೂ 'ಕಮಲಾ' ನಾಟಕವನ್ನು ಕನ್ನಡಕ್ಕೆ ತಂದಿದ್ದೇನೆ.

ಕೊಂಕಣಿ ಭಾಷೆಯ ಕುರಿತಾಗಿ ಅನುವಾದಕರು ಎದುರಿಸುವ ಸಮಸ್ಯೆಯೆಂದರೆ ಕೊಂಕಣಿಯಲ್ಲಿ